**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 995/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | **ಸೌಮ್ಯ** | ಪ್ರಾಸಾಃ 3 |
| ತಂದೆಯ/ಗಂಡನ ಹೆಸರು | | ಶ್ರೀನಿವಾಸ್ | ಚಾಸಾಃ 4 |
| ವಯಸ್ಸು | | 28 ವರ್ಷ | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ಮೈಸೂರು | ದಿಃ 28/04/2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ಚಾಸಾ 1 ನನ್ನ ಅಜ್ಜಿ. ಚಾಸಾ 2 ಮತ್ತು 3 ಗೊತ್ತಿಲ್ಲ. ಚಾಸಾ 5 ರವರು ನನ್ನ ಅತ್ತೆ. ಆಲಂಬೂರು ಗ್ರಾಮ ನಮ್ಮ ಮನೆಯಲ್ಲಿ ದಿಃ 02.04.2014 ರಂದು ಸಮಯ ಮದ್ಯಾಹ್ನ 3.30 ಗಂಟೆಗೆ ನಾನು ನನ್ನ ಅಜ್ಜಿ ಮನೆಯಲ್ಲಿ ಇದ್ದಾಗ ಆರೋಪಿ 1 ರಿಂದ 4 ಮತ್ತು 6 ಅವರೋದಿಗೆ ಸುಮಾರು 25 ಜನರಷ್ಟು ಗುಂಪು ಕಟ್ಟಿಕೊಂಡು ನಮ್ಮ ಮನೆಯ ಮೇಲೆ ಕಲ್ಲನ್ನು ಎಸೆದರು. ಅಕ್ರಮವಾಗಿ ಮನೆಯ ಒಳಗೆ ನುಗ್ಗಿ ಮನೆಯ ಪಾತ್ರೆಗಳು, ಸೋಲಾರ್, ಗೀಜರ್ ಮತ್ತು ಸೋಫಾ ಇನ್ನಿತರ ಮನೆಯ ವಸ್ತುಗಳನ್ನು ಧ್ವಂಸ ಮಾಡಿದರು. ಬೀರು, ಮಂಚ, ಟಿ.ವಿ, ಮನೆಯ ಹೊರಗೆ ತಂದು ಬೆಂಕಿ ಹಾಕಿದರು. ಮನೆ ಹೊರಗಡೆ ನಿಂತಿದ್ದ 2 ಆಟೋಗಳಿಗೆ ಬೆಂಕಿ ಹಚ್ಚಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಬೂದಿ ಮತ್ತು ಮಂಗಳೂರು ಹೆಂಚಿನ ಚೂರುಗಳನ್ನು ನೋಡಿ ಗುರುತಿಸಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ</u>**

ನಮ್ಮೂರಿನ ಪುಟ್ಟಸ್ವಾಮಿ ರವರ ಮಗ ಸ್ವಾಮಿ ಕೊಲೆ ಆಗಿದ್ದ ವಿಚಾರಕ್ಕೆ ಆರೋಪಿಗಳು ನಮ್ಮ ಮನೆ ಮುಂದೆ ಗಲಾಟೆ ಮಾಡಿದರು ಎಂದರೆ ಸರಿ. ಗಲಾಟೆಯ ಸಮಯದಲ್ಲಿ ಆರೋಪಿ 24 ಮತ್ತು 25 ರವರು ನನ್ನ ಹಾಗೂ ನನ್ನ ಅಜ್ಜಿಯನ್ನು ಬಲವಂತವಾಗಿ ಮನೆಯಿಂದ ಹೊರಗಡೆ ಎಳೆದು ತಂದಿರುತ್ತಾರೆ ಎಂದರೆ ಸರಿ. ಉಳಿದ ಆರೋಪಿಗಳು ನಮ್ಮ ಮನೆಯಲ್ಲಿದ್ದ ಪಾತ್ರೆ ಸಾಮಾನುಗಳು ಯು.ಪಿ.ಎಸ್., ಬಟ್ಟೆಗಳು, ಖುರ್ಚಿ, ಡೈನಿಂಗ್ ಟೇಬಲ್ ಮನೆಯಿಂದ ಹೊರಗ ತಂದು ಬೆಂಕಿ ಹಾಕಿರುತ್ತಾರೆ ಎಂದರೆ ಸರಿ. ಮನೆಯಲ್ಲಿ ಯಾರು ಗಂಡಸರು ಇಲ್ಲದ ಕಾರಣ ಮರುದಿನ ನನ್ನ ಅಜ್ಜಿ ಠಾಣೆಗೆ ಹೋಗಿ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಈ ಎಲ್ಲಾ ವಿಚಾರಗಳನ್ನು ಒಳಗೊಂಡಂತೆ ದಿನಾಂಕ 13.08.2014 ರಂದು ಪೊಲೀಸರಿಗೆ ಈಗ ನನಗೆ ಓದಿ ಹೇಳಿದಂತೆ " ದಿನಾಂಕ 01.04.2014- - - - - ನೋಡಿದರೆ ಗುರುತಿಸುತ್ತೇನೆ " ಎಂದು ಪೋಲಿಸರಿಗೆ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಆದ್ದರಿಂದ ಈ ಮೇಲಿನ ಎಲ್ಲಾ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**